ಶ್ರೀ ಸಿ. ಆರ್. ರಂಗೇಗೌಡ.—ಪರ್ಯಾಯ ಯೋಜನೆಗಳ ಬಗ್ಗೆ ಪರಿಶೀಲಿಸುವಾಗ ರಾಜಕೀಯ ಒತ್ತಡಗಳಿಗೆ ಒಳಗಾಗಿ ಪರಿಶೀಲಿಸಲಾಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಪರಿಶೀಲನೆ ಮಾಡುವವರು ಸರ್ಕಾರದವರು ಅಲ್ಲ. ಇಂಜನಿಯರ್‌ಗಳು. ಪರಿಶೀಲನೆ ಮಾಡುವುದಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮೂರು ನಾಲ್ಕು ವರ್ಷಗಳಲ್ಲಿ ಈ ಯೋಜನೆಯನ್ನು ಮುಗಿಸಬೇಕೆಂಬ ಆಸಕ್ತಿ ಸರ್ಕಾರಕ್ಕೆ ಇದೆಯೆಂದು ಈಗ ಹೇಳಿದಿರಿ. ನೆನ್ನೆಯ ಬಡ್ಜೆಟ್ ಪುಸ್ತಕ ನೋಡುವಾಗ ಈ ಯೋಜನೆಗೆ ಮುಂದಿನ ಸಾಲಿಗೆ 40 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. 16 ಕೋಟಿ ರೂಪಾಯಿ ಪ್ರಾಜೆಕ್ಟ್‌ನ್ನು 4 ವರ್ಷದಲ್ಲಿ ಮುಗಿಸುವುದಕ್ಕೆ ಸಾಧ್ಯವೇ?

ಶ್ರೀ ವೀರೇಂದ್ರ ಪಾಟೀಲ್.— Subject to availability of funds, ನಾಲ್ಕು ವರ್ಷದಲ್ಲಿ ಅದನ್ನು ಮುಗಿಸಬೇಕು ಎಂದು ಇದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯ ಬೇಕು ಎಂದು ಹೇಳುತ್ತಾ ಇದ್ದೇವೆ, ಹಾಗೂ ಕೆಲವು ಬಾಬುಗಳಲ್ಲಿ ಖರ್ಚು ಕಡಿಮೆ ಮಾಡಿ ಆ ಹಣವನ್ನು ಇದಕ್ಕಾಗಿ ಉಪಯೋಗಿಸಿ ಮುಗಿಸುವುದಕ್ಕೆ ಏನೂ ಕಷ್ಟವಿಲ್ಲ ಎಂದು ಅನಿಸುತ್ತದೆ.

Tour of Minister for Development and Co-operation

74. Sri K. P. NADAGOUDA (Mudhol).—

Will the Chief Minister be pleased to state :—

(*a*) the total number of tour programmes of the Minister for Co-operation, Development and Panchayat Raj from March, 1967 to January, 1968;

(*b*) the numbers of times he visited Bagalkot during this period;

(*c*) the total amount of T.A. and D.A. claimed by him for this period?

A.—Sri B. D. JATTI (Minister for Food and Civil Supplies) [On behalf of SRI S. NIJALINGAPPA (Chief Minister)].—

(*a*) 33.

(*b*) 23 times in the course of visits to Raichur, Belgaum, Dharwar and other places in Bijapur District.

(*c*) T.A. Rs. 8,729.20
D.A. Rs. 2,460.00

Total ... Rs. 11,189.20

ಶ್ರೀ ಕೆ. ಪಿ. ನಾಡಗೌಡ.—(ಬ) ಪ್ರಶ್ನೆಗೆ ರಾಯಚೂರು, ಬೆಳಗಾಂ, ಧಾರವಾಡ ಮತ್ತು ವಿಜಾಪುರ ಜಿಲ್ಲೆಯಲ್ಲಿನ ಇತರ ಸ್ಥಳಗಳಿಗೆ ಭೇಟಿ ಕೊಡುವ ಸಂದರ್ಭದಲ್ಲಿ 23 ಬಾರಿ ಬಾಗಲಕೋಟೆಗೆ ಭೇಟಿ ಕೊಟ್ಟಿದ್ದಾರೆ ಎಂದು ಉತ್ತರ ಹೇಳಿದೆ. ಬಾಗಲಕೋಟೆಗೆ ಹೋಗುವ ಜರೂರು ಏನು ಇತ್ತು?

†ಶ್ರೀ ಬಿ. ಡಿ. ಜತ್ತಿ.—ಸ್ಪೆಷಲ್ಲಾಗಿ ಇಲ್ಲಿಗೆ ಹೋಗಿ ಖರ್ಚು ಮಾಡುವುದಕ್ಕಿಂತ ಅದು ದಾರಿಯ ಮೇಲೆ ಇರುವುದರಿಂದ ಎರಡೂ ಕೆಲಸವಾಗುತ್ತದೆ ಎಂದು ಹೋಗಿದ್ದಾರೆ.

ಶ್ರೀ ಕೆ. ಪಿ. ನಾಡಗೌಡ.—ಓಟ್ಸ್ ಖರ್ಚಾದ 11,189 ರೂಪಾಯಿಗಳಲ್ಲಿ ಎಲ್ಲಾ ಹಣ ಖರ್ಚಾಗಿದೆಯೇ ಅಥವಾ ಸ್ವಂತಕ್ಕೆ ಹಣ ಏನಾದರೂ ಅವರಿಗೆ ಉಳಿದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಟಿ.ಎ. ಮತ್ತು ಡಿ.ಎ. ಇದರಲ್ಲಿ ಏನೂ ಉಳಿಯುವುದಿಲ್ಲ. ಅಕ್ಯುಯರ್ ಆಗಿ ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನು ಕೊಡುತ್ತಾರೆ. ಇದು ಲಾಭದ ವಿಷಯವಲ್ಲ.

ಶ್ರೀ ಎನ್. ಎ. ಚೆನ್ನೇಗೌಡ.—11,189 ರೂಪಾಯಿ ಟಿ.ಎ., ಡಿ.ಎ. ಖರ್ಚಾಗಿರುವ ಪೀರಿಯಡ್ ಎಷ್ಟು ? ಅದು ಒಂದು ವರ್ಷದಲ್ಲಿ ಆಗಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾರ್ಚಿದಿಂದ ಜನವರಿವರೆಗೆ ಎಂದು ಪ್ರಶ್ನೆಯಲ್ಲಿ ಸ್ಪಷ್ಟವಾಗಿ ಹೇಳಿದೆ.

ಶ್ರೀ ಕೆ. ಪಿ. ನಾಡಗೌಡ.—ಮಂತ್ರಿಗಳು 23 ಸಾರಿ ಬಾಗಲಕೋಟೆಗೆ ಹೋಗುವುದಕ್ಕೆ ಏನೇನು ಕೆಲಸವಿತ್ತು ? ಅವರು ಆಫಿಷಿಯಲ್ ವಿಜಿಟ್ ಕೊಟ್ಟಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಟಿ.ಎ., ಡಿ.ಎ. ಬಿಲ್ಲಿನಲ್ಲಿ ಯಾವ ಊರಿಗೆ ಹೋದರು ಯಾವಾಗ ಹೋದರು ಏತಕ್ಕೆ ಹೋದರು ಎನ್ನುವ ಎಲ್ಲಾ ವಿವರ ಇರುತ್ತದೆ. ಆ ವಿವರ ಕೊಡಲು ಅದಕ್ಕೆ ಅವಕಾಶವಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಹಕಾರ ಮಂತ್ರಿಗಳು ಹನ್ನೊಂದು ತಿಂಗಳುಗಳಲ್ಲಿ 23 ಸಲ ವಿಜಾಪೂರ ಜಿಲ್ಲೆಗೆ ಹೋಗಿದ್ದಾರೆ, 10 ಸಲ ಮಾತ್ರ ಬಾಕಿ ಜಿಲ್ಲೆಗಳಿಗೆ ಹೋಗಿದ್ದಾರೆ. ವಿಜಾಪೂರ ಜಿಲ್ಲೆಯಲ್ಲಿ ಸಹಕಾರಿ ಸಂಸ್ಥೆಗಳು ತುಂಬಾ ಹಣ ತಿಂದು ಹಾಕಿದ್ದಾರೆಯೇ ? ಅಥವಾ ಸಹಕಾರ ಸಂಘಗಳನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಅಲ್ಲಿಗೆ ಹೋಗಿದ್ದಾರೆಯೇ ? ವಿಜಾಪೂರ ಜಿಲ್ಲೆಗೆ ಇಷ್ಟು ಸಲ ಹೋಗುವುದಕ್ಕೆ ಕಾರಣವೇನು ? ಸರಕಾರದ ಖರ್ಚಿನಿಂದ ಮನೆಯ ಕೆಲಸಕ್ಕೆ ಹೋಗಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ತಮ್ಮ ಮನೆ ಕೆಲಸ ಮಾಡುವುದು ಅವರಿಗೆ ಗೊತ್ತಿಲ್ಲ. ಅವರು ಸಾರ್ವಜನಿಕರ ಕೆಲಸ ಮಾಡುತ್ತಾ ಇದ್ದಾರೆ ಈ ಜನ್ಮದಲ್ಲೆಲ್ಲಾ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ವಿಜಾಪೂರ ಜಿಲ್ಲೆಗೆ 23 ಸಲ ಹೋಗುವುದಕ್ಕೆ ಕಾರಣ ಏನು ? ಬಾಗಲಕೋಟೆಗೆ ಹೋಗುವುದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ವಿಜಾಪೂರ ಜಿಲ್ಲೆಗೆ ಟೂರ್ ಪ್ರೋಗ್ರಾಂ ಹಾಕಿದಾಗ್ಲೆ ಬಾಗಲಕೋಟೆಗೆ ಹೋಗಿದ್ದಾರೆ, ಬರುವಾಗ ಹೋಗುವಾಗ ದಾರಿಯಲ್ಲಿ ಇನ್‌ಸಿಡೆಂಟಲ್ಲೇ ಹೋಗಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಬೆಳಗಾಂ, ಧಾರವಾರ್, ರಾಯಚೂರು ಜಿಲ್ಲೆಗಳ ಟೂರ್‌ನಲ್ಲಿ ಬಾಗಲಕೋಟೆಗೆ ಹೋಗುವುದನ್ನು ಸೇರಿಸಿವ್ದಾರೆ. ಬೆಳಗಾಂಕ್ಕೆ ಹೋಗಲಕ್ಕೆ ಧಾರವಾಡಕ್ಕೆ ಹೋಗಲು ರಾಯಚೂರಕ್ಕೆ ಹೋಗಲು ಬಾಗಲಕೋಟೆಯ ಮೇಲಿಂದ ನೇರವಾದ ದಾರಿ ಇದೆಯೇ ? ಅಥವಾ ನೇರವಾದ ದಾರಿ ಬೇರೆ ಇದೆಯೇ ?

ಶ್ರೀ ಬಿ. ಡಿ. ಜತ್ತಿ.—ಬೆಳಗಾಂವಕ್ಕೆ ಹೋಗುವುದು ಇದ್ದಾಗ ಬಾಗಲಕೋಟೆಯು ಮಾರ್ಗವಾಗಿ ಹೋಗುವುದಕ್ಕೆ ಫಸ್ಟ್ ಕ್ಲಾಸ್ ರೋಡ್ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ರಾಮೇಶ್ವರಕ್ಕೆ ಹೋಗಲು ಕುಂಭಕೋಣಂ ಸುತ್ತಿಕೊಂಡು ತಿರುಗಿ ಹೋಗಲು ಕೂಡ ಮಾರ್ಗ ಇದೆ. ಅದರಂತೆ ಇದು ಇದ್ದ ಹಾಗೆ ಕಾಣುತ್ತದೆ. The earth is round. ಕಡಿಮೆ ದೂರ ಇರುವ ನೇರವಾದ ಮಾರ್ಗ ಯಾವುದು ? ಬೆಳಗಾಂಕ್ಕೆ ಹೋಗುವಾಗ ದಾರಿಯಲ್ಲಿ ಚಿತ್ರದುರ್ಗ ಡಾವಣಗೆರೆ ಹರಿಹರ ಸಿಕ್ಕುತ್ತವೆ. ಆ ರೀತಿ ಬೆಳಗಾಂ ಧಾರವಾಡ ರಾಯಚೂರಕ್ಕೆ ಹೋಗುವಾಗ ದಾರಿಯಲ್ಲಿ ಬಾಗಲಕೋಟೆ ಸಿಕ್ಕುತ್ತದೆಯೇ ! ಅದು ನೇರವಾದ ಮಾರ್ಗ ಅಲ್ಲದಿದ್ದರೆ ಬಾಗಲಕೋಟೆಗೆ ಹೋಗುವ ಉದ್ದೇಶ ಏನು ?

ಶ್ರೀ ಬಿ. ಡಿ. ಜತ್ತಿ.—ಬೆಳಗಾಂವಿಗೆ ನೇರವಾಗಿ ಹೋಗುವಾಗ ಹುಬ್ಬಳ್ಳಿ ಧಾರವಾಡ ಮಾರ್ಗದಿಂದ ಎಷ್ಟು ಮೈಲೇಜ್ ಆಗುತ್ತದೆಯೋ ಅಷ್ಟೇ ಮೈಲೇಜು ಬಾಗಲಕೋಟೆಯ ಮಾರ್ಗವಾಗಿ ಹೋದರೂ ಆಗುತ್ತದೆ.

Sri S. SIVAPPA.—The answer is in the name of the hon'ble Chief Minister Sri S. Nijalingappa but questions are being answered by Mr. Jatti although the Chief Minister is here. I do not know when the Chief Minister handed over charge to Mr. Jatti.

Sri S. NIJALINGAPPA.—I was coming a bit late. Therefore he is answering.

ಶ್ರೀ ಎಚ್. ಸಿದ್ದವೀರಪ್ಪ.—ಬಾಗಲಕೋಟೆಯು ಅವರ ಕಮೀನೆಂಟ್ ಅಂದರೆ ಕಾಯಂ ಸ್ಥಳವಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಅವರು ಹುನಗುಂದ ತಾಲ್ಲೂಕದವರು. ಬಾಗಲಕೋಟೆಗೆ ಹೋಗಿ ಬಂದು ಮಾಡುತ್ತಾರೆ.

ಶ್ರೀ ಎನ್. ಲೋಕಯ್ಯ ನಾಯಕ್.—11,189 ರೂಪಾಯಿ ಖರ್ಚಾಗಿದೆ. ಇವರ ಜೊತೆ ಇರತಕ್ಕ ಅಪ್ತ ಕಾರ್ಯದರ್ಶಿಗೋಸ್ಕರ ಎಷ್ಟು ಟಿ.ಎ., ಡಿ.ಎ. ಖರ್ಚಾಗಿದೆ ? ಕಾರು ಪೆಟ್ರೋಲಿಗೆ ಎಷ್ಟು ಖರ್ಚಾಗಿದೆ.

ಶ್ರೀ ಬಿ. ಡಿ. ಜತ್ತಿ.—ಪ್ರತ್ಯೇಕವಾಗಿ ಬೇರೆ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳಬಹುದು. ಮಿನಿಸ್ಟರ್ ಅವರಿಗೆ ಕೊಡುವ ಟಿ.ಎ. ಮತ್ತು ಡಿ.ಎ. ನಲ್ಲಿ ಯಾವ ತರಹದ ಉಳಿತಾಯವಿಲ್ಲ. ಅಕ್ಕೌಂಟಿಯರ್ ಖರ್ಚು ಮಾಡುವುದನ್ನು ಕೊಡಲಾಗುತ್ತದೆ. ಇದರಲ್ಲಿ ಏನು ಉಳಿಯುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಒಂಬತ್ತು ತಿಂಗಳುಗಳಲ್ಲಿ 33 ಸಲ ಟೂರ್ ಪ್ರೋಗ್ರಾಂ ಹಾಕಿಕೊಂಡಿದ್ದಾರೆ. ಅಂದರೆ ಒಂದು ತಿಂಗಳಿನಲ್ಲಿ ಮೂರು ನಾಲ್ಕು ಸಲ ಟೂರ್ ಮೇಲೆ ಹೋಗಿದ್ದಾರೆ. ಟಿ.ಎ., ಡಿ.ಎ. ಜಾಸ್ತಿ ತೆಗೆದುಕೊಳ್ಳಲು ಟೂರ್ ಮಾಡುತ್ತಾರೆ ಎಂದು ಜನರ ಆಕ್ಷೇಪಣೆ ಇದೆ. ಒಂದು ತಿಂಗಳಿಗೆ ಇಷ್ಟು ದಿವಸ ಟೂರ್ ಮಾಡಬೇಕು ಎಂದು ಇದೆಯೇ ? ಅಥವಾ ಜನರ ಕಂಪ್ಲೇಂಟ್ಸ್ ಹೇಳಬೇಕೆಂದು ನಿಮ್ಮನೆ ಟೂರ್ ಮಾಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಯಾವ ಡಿಸ್ಟ್ರಿಕ್ಟಿನಲ್ಲಿ ಕೆಲಸ ಇದೆಯೋ ಅಲ್ಲಿಗೆ ಹೋಗುತ್ತಾರೆ.

ಶ್ರೀ ಎಸ್. ಗೋಪಾಲಗೌಡ —ನ್ಯಾಯವಿ, ಹಿಂದೆ ಸರಕಾರದವರು ಮಂತ್ರಿಗಳ ಪ್ರವಾಸದ ಬಗ್ಗೆ ನೀತಿ ನಿಯಮ ಅನುಸರಿಸಬೇಕು ಎಂದು ತೀರ್ಮಾನ ಮಾಡಿದ್ದಾರೆ. ಅದನ್ನು ಅನುಸರಿಸುತ್ತಾರೆಯೇ ? ಟೂರ್ ಪ್ರೋಗಾಂ ಹಾಕಿ ತಮ್ಮ ಊರಿಗೆ ಹೋಗುವುದಕ್ಕೆ ಭತ್ಯ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಒಂದು ತಿಂಗಳಿನಲ್ಲಿ 10 ದಿವಸ ಮಿನಿಸ್ಟರ್ ಟೂರ್ ಮಾಡಬೇಕು ಎನ್ನುವುದನ್ನು ಸ್ವಲ್ಪ ಹೆಚ್ಚು ಕಡಿಮೆ ಎಲ್ಲರೂ ಆ ರೀತಿ ನಡೆಯುತ್ತಾರೆ.

ಶ್ರೀ ಎಸ್ ಶಿವಪ್ಪ.— ಸಹಕಾರ ಮತ್ತು ಅಭಿವೃದ್ಧಿ ಶಾಖಾ ಸಚಿವರು 33 ಸಾರಿ ಬಾಗಲಕೋಟೆಗೆ ಹೋಗಿರುವುದನ್ನು ನೋಡಿದರೆ ದಯವಿಟ್ಟು ಅವರ ಆಫೀಸನ್ನು ಬಾಗಲಕೋಟೆಗೆ ವರ್ಗ ಮಾಡುವುದಕ್ಕೆ ಪರ್ಯಾಲೋಚನೆ ಮಾಡುತ್ತಿರಾ ?

Mr. DEPUTY SPEAKER.—How does it arise ?

ಶ್ರೀ ಕೆ. ಪಿ. ನಾಡಗೌಡ.—ಮಂತ್ರಿಗಳ ಮನೆ ಅಲ್ಲಿ ಇರುವುದರಿಂದ ತಮ್ಮ ಊರಿಗೆ ಹೋಗಿ ಬಿಟ್ಟು ಅವರು ಟಿ.ಎ., ಡಿ.ಎ. ಕ್ಲೈಮ್ ಮಾಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಬಾಗಲಕೋಟೆಯಲ್ಲಿ ಅವರ ಮನೆ ಇಲ್ಲ. ಅದು ನಿಮಗೂ ಗೊತ್ತಿದೆ.

ಶ್ರೀ ಕೆ. ಪಿ. ನಾಡಗೌಡ.—ಪ್ರತಿಯೊಂದು ಜಿಲ್ಲೆಯಲ್ಲಿ ಡೆಪ್ಯುಟಿ ಕಮೀಷನರ್ ಇರುತ್ತಾರೆ. ಯಾವಾಗಲೂ ಇವರು 20 ದಿವಸ ಟೂರ್ ಮೇಲೆ ಇರುತ್ತಾರೆ, ಇವರಿಗೆ ಮಾಹಿತಿ ಒದಗಿಸುತ್ತಾರೆ. ಹಾಗಾದರೆ ವಿಜಾಪುರ ಜಿಲ್ಲೆಯಲ್ಲಿ ಆಡಳಿತ ಯಂತ್ರ ಇಲ್ಲವೆ ? ಇದ್ದರೂ ಕೂಡ ಅವರು ಇವರ ಕೂಡ ಸಹಕಾರ ಮಾಡುವುದಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಮಂತ್ರಿಗಳ ಕೂಡ ಸಹಕಾರ ಮಾಡದೇ ಹೋದರೆ ಅಧಿಕಾರದಲ್ಲಿರಲು ಆಗುವುದಿಲ್ಲ.

Construction of bandara across Savihalla

75. Sri F. S. PATIL (Kalghatgi).—

Will the Minister for Public Works be pleased to state :—

(a) whether it has come to their notice that the survey work in respect of the contruction of a bandara across Savihalla near Somanakoppa Village, Kalghatgi Taluk is going on from a long time ;